# ಅಮೇರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

**ಭಾಗ ೩೧**

## ವೀರಯೋಧನ ಪುನರಾಗಮನ – ೪

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರದ ತಮ್ಮ ಕಟ್ಟಕಡೆಯ ಉಪನ್ಯಾಸವನ್ನು ಸಂಪನ್ನಗೊಳಿಸಿದ್ದಾರೆ. ಅದರ ಹೆಸರು 'ಭಾರತದಲ್ಲಿ ಕ್ರೈಸ್ತ ಮಿಷನರಿಗಳು'. ತಮ್ಮ ಮೇಲೆ ಕ್ರೈಸ್ತ ಮಿಷನರಿಗಳು ನಡೆಸಿದ ಟೀಕಾಪ್ರಹಾರಕ್ಕೆ ಉತ್ತರವಾಗಿ ಅವರು ಈ ಭಾಷಣವನ್ನು ಮಾಡಿದರು. ಅವರ ಕುಂದುಕೊರತೆಗಳನ್ನು ಎತ್ತಿ ತೋರಿಸಿದರು. ಇದಾದ ಮೇಲೆ ನೀರವತೆ ನೆಲೆಸುತ್ತದೆ. ಎಲ್ಲೂ ಸ್ವಾಮೀಜಿಯವರ ಬಗ್ಗೆ ಸ್ವಲ್ಪವೂ ಮಾತುಕತೆ ಕ್ರೈಸ್ತ ಮಿಷನರಿಗಳ ವಲಯದಲ್ಲಿ ಕಂಡುಬರುವುದಿಲ್ಲ. ಹಾಗೆಂದು ಅವರು ಸುಮ್ಮನೆ ಕುಳಿತಿದ್ದಾರೆ ಎಂದು ಅರ್ಥವಲ್ಲ. ಸ್ವಾಮೀಜಿಯವರ ಮೇಲಿನ ಅಪಪ್ರಚಾರದ ಕೇಂದ್ರ, ಅಮೇರಿಕಾದಿಂದ ಭಾರತಕ್ಕೆ ಸ್ಥಳಾಂತರಗೊಂಡಿತ್ತು, ಅಷ್ಟೆ. ಅಮೇರಿಕದ ಚರ್ಚುಗಳ ವೇದಿಕೆಗಳಿಂದ, ಹಲವಾರು ವರ್ಷಗಳಿಂದ ಹಿಂದೂಧರ್ಮದ ಮೇಲೆ ಮಾಡುತ್ತಿದ್ದ ನಿಂದೆ ಮತ್ತು ಅಪಪ್ರಚಾರಗಳು ಮಾತ್ರ ನಿಂತುಹೋದವು.

ಅಮೇರಿಕಾದಲ್ಲಿ ಸ್ವಾಮೀಜಿಯವರ ಮೇಲಿನ ಅಪಪ್ರಚಾರ ಒಳಗೊಳಗೇ ನಡೆಯುತ್ತಿತ್ತು. ಬಹಿರಂಗ ನಿಂದನೆಯ ಕೇಂದ್ರ ಭಾರತಕ್ಕೆ ಸ್ಥಳಾಂತರವಾಯಿತು. ಈ ಪಿಸುಮಾತಿನ ಅಪಪ್ರಚಾರದ ಬಗ್ಗೆ ಸ್ವಾಮೀಜಿ ಆಳಸಿಂಗ ಪೆರುಮಾಳ್ ಅವರಿಗೆ ಏಪ್ರಿಲ್ ೧೮೯೪ರಲ್ಲಿ ಹೀಗೆ ಬರೆಯುತ್ತಾರೆ: ''ಸಾಂಪ್ರದಾಯಿಕ ಪಾದ್ರಿಗಳು ನನ್ನ ವಿರುದ್ಧ ಮುಗಿಬಿದ್ದಿದ್ದಾರೆ ಎನ್ನುವುದೇನೋ ಸರಿಯೆ. ಆದರೆ ನೇರವಾಗಿ ನನ್ನನ್ನು ವಿರೋಧಿಸುವುದು ಅಷ್ಟೊಂದು ಸುಲಭವಲ್ಲವೆಂದು ಅವರಿಗೆ ತಿಳಿದುಬಂದಿದೆ. ಹೀಗಾಗಿ ಅವರು ನನ್ನ ಕಾರ್ಯದಲ್ಲಿ ಎಲ್ಲ ವಿಧವಾದ ವಿಘ್ನವನ್ನು ತರುತ್ತಿದ್ದಾರೆ, ನನಗೆ ಕೆಟ್ಟಹೆಸರು ತರಲು ಮತ್ತು ನನ್ನನ್ನು ನಿಂದಿಸಲು ಎಲ್ಲ ಬಗೆಯಲ್ಲಿಯೂ ಪ್ರಯತ್ನಿಸುತ್ತಿದ್ದಾರೆ.'' ಇದಕ್ಕಿಂತ ಕೆಟ್ಟ ಸಂಗತಿಯೇನೆಂದರೆ, ಸ್ವಾಮೀಜಿಯವರ ಮಾನವನ್ನು ತೆಗೆಯಲು ಎಲ್ಲ ರೀತಿಯ ಅಪಪ್ರಚಾರವನ್ನು ಮಾಡುವ ಹೀನ ಪ್ರಯತ್ನವನ್ನು ಮಾಡುವುದರೊಂದಿಗೆ, ಅವರ ಜೀವವನ್ನೂ ತೆಗೆದುಬಿಡಲು ಅವರ ವಿರೋಧಿಗಳು ಪ್ರಯತ್ನಿಸಿದರು ಎನ್ನುವುದು.

ಈ ವಿಚಾರದಲ್ಲಿ ಒಂದು ಘಟನೆಯನ್ನು ಇಲ್ಲಿ ನಾವು ದಾಖಲಿಸಲೇಬೇಕು. ಇದು ಪ್ರಕಟವಾಗಿರುವುದು ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಾದ ಸ್ವಾಮಿ ವಿಜ್ಞಾನಾನಂದರ ಸ್ಮರಣಿಕೆಗಳಲ್ಲಿ. ಈ ಘಟನೆಯನ್ನು ಅವರು ಸ್ವಾಮಿ ವಿವೇಕಾನಂದರ ಬಾಯಿಯಿಂದಲೇ ಕೇಳಿದರಂತೆ. ಸ್ವಾಮೀಜಿ ಡೆಟ್ರಾಯಿಟ್ನಲ್ಲಿ ಇರುವಾಗ ನಡೆದ ಘಟನೆ ಅದು. ಅವರು ಒಂದು ಔತಣಕೂಟದಲ್ಲಿ ಕುಳಿತಿದ್ದರು. ಕಾಫಿ ಕುಡಿಯಲು ಬಟ್ಟಲನ್ನು ಎತ್ತಿದ್ದರಷ್ಟೇ. ಅಲ್ಲಿಯೇ ಅವರಿಗೆ ಶ್ರೀರಾಮಕೃಷ್ಣರ ದರ್ಶನವಾಯಿತು. ಗುರುದೇವರು ಸ್ವಾಮೀಜಿಯವರಿಗೆ ಹೇಳಿದರು: ''ಇದನ್ನು ಕುಡಿಯಬೇಡ, ಇದರಲ್ಲಿ ವಿಷವಿದೆ.'' ಈ ಘಟನೆಯನ್ನು ನಾವು ಸ್ವಾಮಿ ವಿಜ್ಞಾನಾನಂದಜಿ ಅವರಂಥ ಬ್ರಹ್ಮಜ್ಞಾನಿಗಳಿಂದಲೇ ಕೇಳಿರುವುದರಿಂದ, ಅದರ ಸತ್ಯಾಂಶವನ್ನು ತಳ್ಳಿಹಾಕುವಂತಿಲ್ಲ. ಇದೇ ಸಮಯದಲ್ಲಿ ಕೆಲವು ವ್ಯಕ್ತಿಗಳು ಸ್ವಾಮೀಜಿಯವರ ಮೇಲೆ ಇಟ್ಟುಕೊಂಡಿದ್ದ ದ್ವೇಷವನ್ನು ನಾವು ಕಡೆಗಣಿಸುವಂತೆಯೂ ಇಲ್ಲ. ''ಆದರೆ ಗುರುದೇವರು ನನ್ನ ಜೊತೆಯಲ್ಲಿ ಸರ್ವದಾ ಇದ್ದಾರೆ'' ಎಂದು ಸ್ವಾಮೀಜಿ ತಮ್ಮ ಸಹೋದರ ಸಂನ್ಯಾಸಿಗಳಾದ ಸ್ವಾಮಿ ರಾಮಕೃಷ್ಣಾನಂದಜಿ ಅವರಿಗೆ ೧೮೯೪ರ ಜನವರಿಯಲ್ಲಿಯೇ ಬರೆಯುತ್ತಾ ಮುಂದುವರಿಸುತ್ತಾರೆ, ''ಯಾರು ಏನನ್ನು ತಾನೇ ಮಾಡಬಲ್ಲರು?''

ಇನ್ನೊಂದು ಮುಖ್ಯವಾದ ಸಂಗತಿಯೆಂದರೆ, ಈ ದುರ್ಭರ ಸಮಯದಲ್ಲಿ ಸ್ವಾಮೀಜಿಯವರ ಮಿತ್ರರು ಅವರಿಗೆ ನಿರಂತರ ಬೆಂಬಲವನ್ನು ನೀಡುತ್ತಲೇ ಬಂದರು. ಡೆಟ್ರಾಯ್ಟ್ ನಗರದಲ್ಲಿ ಸ್ವಾಮಿ ವಿವೇಕಾನಂದರ ಆತಿಥೇಯರಾಗಿದ್ದ ಶ್ರೀಮತಿ ಬ್ಯಾಗ್ಲಿ ಮತ್ತು ಅವರ ಅವಿವಾಹಿತ ಪುತ್ರಿ ಹೆಲೆನ್ – ಇಬ್ಬರೂ ಸ್ವಾಮೀಜಿಯವರ ವಿರುದ್ಧ ಡೆಟ್ರಾಯ್ಟ್ ನಗರದಲ್ಲಿ ಅನಾಮಧೇಯ ಪತ್ರಗಳ ಮೂಲಕ ಮತ್ತು ಪಿಸುಮಾತಿನ ಪ್ರಚಾರದ ಮೂಲಕ ನಡೆಯುತ್ತಿದ್ದ ನಿರಂತರ ನಿಂದನೆಗಳನ್ನು ಪತ್ರಿಕೆಗಳಿಗೆ ಹಲವಾರು ಪತ್ರಗಳನ್ನು ಬರೆಯುವ ಮೂಲಕ ಸಮರ್ಥವಾಗಿ ಎದುರಿಸಿದರು. ಇದನ್ನು ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯು ನಮಗೆ ತಿಳಿಸಿಕೊಡುತ್ತದೆ. ಶ್ರೀಮತಿ ಬ್ಯಾಗ್ಲಿ ಅವರ ಪತ್ರಗಳು ಸ್ವಾಮೀಜಿಯವರ ಡೆಟ್ರಾಯ್ಟ್ ನಗರದ ವಾಸ್ತವ್ಯದ ಬಗ್ಗೆ ಬಹಳಷ್ಟು ಬೆಳಕನ್ನು ಚೆಲ್ಲುತ್ತವೆ. ಅದರಲ್ಲೂ ಅವರು ಶ್ರೀಮತಿ ಸ್ಮಿತ್ ಎಂಬಾಕೆಗೆ ಬರೆದ ಪತ್ರವೊಂದು ಮಹತ್ವವಾದುದು. ಶ್ರೀಮತಿ ಸ್ಮಿತ್ ಬಗ್ಗೆ ನಮಗೆ ಏನೂ ಗೊತ್ತಿಲ್ಲ. ಆದರೆ, ಆಕೆ ಸ್ವಾಮೀಜಿಯ ವಿರುದ್ಧ ನಡೆಯುತ್ತಿದ್ದ ಅಪಪ್ರಚಾರದಿಂದ ನೊಂದಿದ್ದಳು ಎನ್ನುವುದಂತೂ ಸತ್ಯ. ಹಾಗೆಂದೇ, ಈ ವಿಷಯದ ಬಗ್ಗೆ ಸತ್ಯವನ್ನು ತಿಳಿದುಕೊಳ್ಳಲು ಆಕೆ ಶ್ರೀಮತಿ ಬ್ಯಾಗ್ಲಿ ಅವರನ್ನು ಈ ಬಗ್ಗೆ

ಖಚಿತವಾದ ಹೇಳಿಕೆಯೊಂದನ್ನು ನೀಡುವಂತೆ ಕೇಳಿಕೊಂಡಿರಬೇಕು. ಶ್ರೀಮತಿ ಬ್ಯಾಗ್ಲಿ ಇದಕ್ಕೆ ಪ್ರತಿಕ್ರಯಿಸುತ್ತ, ಅನ್ನಿಸ್ಕ್ವಾಮ್ ನಗರದಿಂದ ಜೂನ್ ೨೨, ೧೮೯೪ರಂದು ಬರೆದ ಪತ್ರದಲ್ಲಿ ಈ ಹೇಳಿಕೆಯನ್ನು ನೀಡುತ್ತಾರೆ:

‘‘ನೀನು ನನ್ನ ಪ್ರಿಯ ಸ್ನೇಹಿತರಾದ ಸ್ವಾಮಿ ವಿವೇಕಾನಂದರ ಬಗ್ಗೆ ಬರೆದಿದ್ದೀಯೆ. ಅವರ ಚಾರಿತ್ರ್ಯಕ್ಕೆ ನನ್ನ ಪ್ರಶಂಸೆಯನ್ನು ಸಲ್ಲಿಸಲು ನನಗೆ ಸಿಕ್ಕ ಈ ಅವಕಾಶಕ್ಕಾಗಿ ನಾನು ಸಂತೋಷಪಡುತ್ತೇನೆ. ಅವರ ನಡತೆಯ ಬಗ್ಗೆ ಯಾರಾದರೂ ಪ್ರಶ್ನಿಸುತ್ತಾರೆ ಎನ್ನುವುದೇ ನನಗೆ ಸಹಿಸಲಾಗುವುದಿಲ್ಲ. ಅವರು ಅಮೆರಿಕನ್ನರು ಹಿಂದೆಂದೂ ಹೊಂದಿರದ ಜೀವನದ ಉನ್ನತ ಮೌಲ್ಯಗಳನ್ನು ಅಮೆರಿಕಾಗೆ ನೀಡಿದ್ದಾರೆ. ಡೆಟ್ರಾಯ್ಟ್ ನಗರದ ಜನತೆ ಸಂಪ್ರದಾಯಸ್ಥರು. ಅಂಥ ನಗರದಲ್ಲಿಯೇ ಹಿಂದೆಂದೂ ನಾವು ನೋಡದ ಬಹುಸಂಖ್ಯೆಯ ಕೂಟಗಳಲ್ಲಿ ಅವರನ್ನು ಗೌರವಿಸಲಾಯಿತು. ಅವರ ವಿರುದ್ಧವಾಗಿ ಒಂದು ಪದವನ್ನಾದರೂ ಯಾರಾದರೂ ಆಡಿದರೆ, ಅಂಥವರು ವಿವೇಕಾನಂದರ ಮಹಾನ್ ವ್ಯಕ್ತಿತ್ವದ ಬಗ್ಗೆ ಮತ್ತು ಆಧ್ಯಾತ್ಮಿಕ ಔನ್ನತ್ಯದ ಬಗ್ಗೆ ಅವರು ಇಟ್ಟುಕೊಂಡಿರುವ ಅಸೂಯೆಯನ್ನು ಮಾತ್ರವೇ ತೋರಿಸುತ್ತದೆ. ಸ್ವಾಮಿ ವಿವೇಕಾನಂದರು ಹಾಗೆ ಅಸೂಯೆ ಪಡುವಂಥ ಯಾವುದೇ ಕೆಟ್ಟ ಕೆಲಸವನ್ನು ಯಾವುದನ್ನೂ ಮಾಡಿಲ್ಲ.

‘‘ಕ್ರೈಸ್ತರಿಗೆ ಸ್ವಾಮಿ ವಿವೇಕಾನಂದರು ಒಂದು ಹೊಸ ಆಕರ್ಷಣೆಯ ಕೇಂದ್ರವಾಗಿದ್ದಾರೆ. ಅವರು ನಾವು ಹೆಚ್ಚು ದಿವ್ಯವಾದ ಮತ್ತು ಉದಾತ್ತವಾದ ಪ್ರಾಯೋಗಿಕ ಜೀವನವನ್ನು ನಡೆಸಲು ಸಹಾಯ ಮಾಡುತ್ತಾರೆ. ಒಬ್ಬ ಧಾರ್ಮಿಕ ಬೋಧಕರಾಗಿ ಮತ್ತು ಧರ್ಮದ ಆದರ್ಶವಾಗಿ ಬೇರೊಬ್ಬರನ್ನು ನಾನು ಅರಿಯೆನು. ಅವರು ಉದ್ವೇಗಿಯಾದ ವ್ಯಕ್ತಿಯೆಂದು ಹೇಳುವುದು ತಪ್ಪು ಮಾತ್ರವಲ್ಲ, ಅದು ಸತ್ಯಕ್ಕೆ ದೂರವಾದುದು. ಯಾರು ದಿನದಿನವೂ ಅವರ ಸಂಪರ್ಕಕ್ಕೆ ಬಂದಿರುವರೋ, ಅವರೆಲ್ಲರೂ ಸ್ವಾಮಿ ವಿವೇಕಾನಂದರ ಬಗ್ಗೆ ಉತ್ಸಾಹಭರಿತರಾಗಿಯೇ ಅವರ ಪ್ರಖರ ಗುಣಗಳ ಬಗ್ಗೆ ಮಾತನಾಡುತ್ತಾರೆ. ಡೆಟ್ರಾಯ್ಟ್ ನಗರದ ಜನರು ಕಟು ವಿಮರ್ಶಕರು; ಯಾರನ್ನೂ ಸುಲಭವಾಗಿ ಒಪ್ಪಿಕೊಳ್ಳುವವರಲ್ಲ. ಅಂಥವರೂ ಕೂಡ ಸ್ವಾಮಿ ವಿವೇಕಾನಂದರನ್ನು ಪ್ರಶಂಸಿಸುತ್ತಾರೆ ಮತ್ತು ಗೌರವಿಸುತ್ತಾರೆ. ನನ್ನ ಗಂಡುಮಕ್ಕಳು, ನನ್ನ ಅಳಿಯಂದಿರು, ಇಡೀ ನನ್ನ ಕುಟುಂಬವರ್ಗದವರೆಲ್ಲರೂ ಸ್ವಾಮಿ ವಿವೇಕಾನಂದರು ಯಾವತ್ತೂ ಒಬ್ಬ ಸಭ್ಯವ್ಯಕ್ತಿ ಎಂದು ಕಂಡುಕೊಂಡಿದ್ದಾರೆ. ಅವರು ಇತರರಿಗೆ ಗೌರವವನ್ನು ಕೊಡುವಂಥವರು, ವಿನಮ್ರ ನಡವಳಿಕೆಯವರು, ಆಕರ್ಷಕ ಸಹಚರ, ಯಾವತ್ತೂ ನಾವು ಸ್ವಾಗತಿಸಬಹುದಾದ ಅತಿಥಿ ಎಂದು ಅರಿತುಕೊಂಡಿದ್ದಾರೆ.

‘‘ನಾನು ಈಗ ಅನ್ನಿಸ್ಕ್ವಾಮ್‌ನಲ್ಲಿರುವ ನಮ್ಮ ಕುಟುಂಬದ ಬೇಸಿಗೆ ವಿಹಾರಕ್ಕೆ ಸ್ವಾಮಿ ವಿವೇಕಾನಂದರನ್ನು ಆಹ್ವಾನಿಸಿದ್ದೇನೆ. ನಮ್ಮ ಕುಟುಂಬದಲ್ಲಿ ಅವರನ್ನು ಎಂದಿಗೂ ಗೌರವಿಸುತ್ತೇವೆ ಮತ್ತು ಸ್ವಾಗತಿಸುತ್ತೇವೆ. ಅವರ ಬಗ್ಗೆ ಇಲ್ಲಸಲ್ಲದ ನುಡಿಗಳನ್ನು ಆಡುವವರ ಬಗ್ಗೆ ನನಗೆ ಕೋಪಕ್ಕಿಂತ ಹೆಚ್ಚಾಗಿ, ನಿಜವಾಗಿಯೂ ಕನಿಕರವಿದೆ. ಇದಕ್ಕೆ ಕಾರಣ ತಾವು ಏನನ್ನು ಮಾತನಾಡುತ್ತಿರುವರೋ, ಅದರ ಬಗ್ಗೆ ಅಂಥ ಜನರಿಗೆ ತಿಳಿದಿರುವುದು ಅತ್ಯಲ್ಪ. ಸ್ವಾಮಿ ವಿವೇಕಾನಂದರು ಶಿಕಾಗೋ ನಗರದ ಮಿಸ್ಟರ್ ಮತ್ತು ಮಿಸೆಸ್ ಹೇಲ್ ದಂಪತಿಗಳ ಅತಿಥಿಗಳಾಗಿದ್ದರು. ಅದು ಒಂದು ರೀತಿಯಲ್ಲಿ ಅವರ ಸ್ವಂತ ಮನೆಯೇ ಆಗಿಬಿಟ್ಟಿತ್ತು. ಅವರಿಬ್ಬರೂ ಸ್ವಾಮಿ ವಿವೇಕಾನಂದರನ್ನು ಬಿಟ್ಟು ಅಗಲುತ್ತಿರಲಿಲ್ಲ. ಆ ದಂಪತಿಗಳು ಪ್ರೆಸ್ಬಿಟೇರಿಯನ್ ಕ್ರೈಸ್ತ ಸಂಪ್ರದಾಯದವರು, ಬಹಳ ಸುಸಂಸ್ಕೃತರು, ಸಜ್ಜನರು. ಅವರು ಸ್ವಾಮಿ ವಿವೇಕಾನಂದರ ಅಭಿಮಾನಿಗಳು; ಅವರಿಗೆ ಬಹಳಷ್ಟು ಗೌರವವನ್ನು ನೀಡುತ್ತಾರೆ; ಅವರನ್ನು ಪ್ರೀತಿಸುತ್ತಾರೆ. ಸ್ವಾಮಿ ವಿವೇಕಾನಂದರು ಶಕ್ತಿಶಾಲಿಯಾದ ಉದಾತ್ತ ಮಾನವರು. ಅವರು ಭಗವಂತ ಸಾನ್ನಿಧ್ಯವನ್ನು ಅನುಭವಿಸುವಂಥವರು. ಸ್ವಾಮಿಗಳು ಮಗುವಿನಂತೆ ಬಹಳ ಸರಳ ಸ್ವಭಾವದವರು, ವಿಶ್ವಾಸಿಗಳು.

‘‘ಡೆಟ್ರಾಯ್ಟಿನ ನಮ್ಮ ಮನೆಯಲ್ಲಿ ಅವರಿಗೆ ಸಾಯಂಕಾಲದ ಸ್ವಾಗತ ಕೂಟವನ್ನು ಏರ್ಪಡಿಸಿದ್ದೆವು. ಅದಕ್ಕೆ ಹಲವಾರು ಸಭ್ಯ ಮಹಿಳೆಯರು ಮತ್ತು ಪುರುಷರನ್ನು ನಾನು ಆಹ್ವಾನಿಸಿದ್ದೆನು. ಅದಾಗಿ ಎರಡು ವಾರಗಳ ನಂತರ, ಅವರು ನಮ್ಮ ಮನೆಯ ಮೊಗಸಾಲೆಯಲ್ಲಿ ಆಹ್ವಾನಿತ ಅತಿಥಿಗಳ ಸಮಕ್ಷಮದಲ್ಲಿ ಭಾಷಣ ಮಾಡಿದರು. ಅದರಲ್ಲಿ ನಗರದ ಪ್ರಸಿದ್ಧ ವಕೀಲರು, ನ್ಯಾಯಾಧೀಶರು, ಪಾದ್ರಿಗಳು, ಸೈನ್ಯಾಧಿಕಾರಿಗಳು, ವೈದ್ಯರು ಮತ್ತು ಉದ್ಯೋಗಿಗಳನ್ನು ಸೇರಿಸಿದ್ದೆನು. ಅವರೆಲ್ಲರೂ ತಮ್ಮ ಪತ್ನಿ ಮತ್ತು ಹೆಣ್ಣುಮಕ್ಕಳೊಂದಿಗೆ ಬಂದು ಭಾಷಣವನ್ನು ಆಲಿಸಿದರು. ಸ್ವಾಮಿ ವಿವೇಕಾನಂದರು ಅಂದು, ‘ಪ್ರಾಚೀನ ಹಿಂದೂ ತತ್ತ್ವಶಾಸ್ತ್ರಜ್ಞರು ಮತ್ತು ಅವರ ಬೋಧಿಸಿದ್ದು ಏನು?’ ಎಂಬ ವಿಷಯವಾಗಿ ಎರಡು ಗಂಟೆಗಳ ಕಾಲ ಮಾತನಾಡಿದರು. ಅವರು ಹೇಳಿದ್ದೆಲ್ಲವನ್ನೂ ಜನರು ಬಹಳ ಆಸಕ್ತಿಯಿಂದ ಕಡೆಯವರೆಗೆ ಕೇಳಿಸಿಕೊಂಡರು. ಮುಂದೆ ಅವರು ಭಾಷಣ ಮಾಡಿದಾಗಲೆಲ್ಲ ಜನರು ಅದನ್ನು ಸಂತೋಷದಿಂದ ಕೇಳಿಸಿಕೊಳ್ಳುತ್ತಿದ್ದರು ಮತ್ತು ಉದ್ಗಾರವೆತ್ತುತ್ತಿದ್ದರು; ಒಬ್ಬ ಮನುಷ್ಯನು ಈ ರೀತಿ ಪ್ರಭಾವಶಾಲಿಯಾಗಿ ಮಾತನಾಡುವುದನ್ನು ನಾನೆಂದಿಗೂ ಕೇಳಿಸಿಕೊಂಡಿಲ್ಲ ಎಂದು. ಸ್ವಾಮಿ ವಿವೇಕಾನಂದರು ಯಾರ ಮನಸ್ಸನ್ನೂ ನೋಯಿಸುವವರಲ್ಲ. ಅದಕ್ಕೆ ಬದಲಾಗಿ ಜನರನ್ನು ಉನ್ನತ ಪ್ರಜ್ಞೆಯ ಹಂತಕ್ಕೆ ಏರಿಸಿಬಿಡುತ್ತಾರೆ. ಆಗ ಜನರು ಮಾನವ ನಿರ್ಮಿತ ಮತ, ಸಂಪ್ರದಾಯಗಳನ್ನು ಮೀರಿದ ಯಾವುದನ್ನೋ ಕಂಡುಕೊಳ್ಳುತ್ತಾರೆ. ಹಾಗೂ ತಮ್ಮ ಧಾರ್ಮಿಕ ನಂಬಿಕೆಗಳಲ್ಲಿ ಸ್ವಾಮಿ ವಿವೇಕಾನಂದರನ್ನು ಏಕೀಭಾವಗೊಳಿಸಿಕೊಳ್ಳುತ್ತಾರೆ.

‘‘ಪ್ರತಿಯೊಬ್ಬ ಮಾನವ ಜೀವಿ ಕೂಡ ಸ್ವಾಮಿ ವಿವೇಕಾನಂದರ ಪರಿಚಯವನ್ನು ಹೊಂದಿದರೆ ಮತ್ತು ಅವರೊಡನೆ

ಒಂದೇ ಮನೆಯಲ್ಲಿ ವಾಸಿಸಿದರೆ ಉತ್ತಮ ವ್ಯಕ್ತಿಯಾಗುತ್ತಾನೆ. ನಾನು ಅಮೆರಿಕಾದಲ್ಲಿರುವ ಪ್ರತಿಯೊಬ್ಬರೂ ಸ್ವಾಮಿ ವಿವೇಕಾನಂದರ ಪರಿಚಯವನ್ನು ಮಾಡಿಕೊಳ್ಳಬೇಕೆಂದು ಬಯಸುತ್ತೇನೆ. ಭಾರತ ದೇಶವು ಇಂಥ ಮಹಾತ್ಮರನ್ನು ಇನ್ನಷ್ಟು ಹೊಂದಿದ್ದರೆ, ಅವರನ್ನೂ ಈ ದೇಶಕ್ಕೆ ಕಳಿಸಬೇಕೆಂದು ಕೇಳಿಕೊಳ್ಳುತ್ತೇನೆ.''

ಶ್ರೀಮತಿ ಬ್ಯಾಗ್ಲಿ ತಮ್ಮ ಅದೇ ಸ್ನೇಹಿತೆಗೆ ಮಾರ್ಚ್ ೨೦, ೧೮೯೫ರಂದು ಇನ್ನೊಂದು ಪತ್ರವನ್ನು ಬರೆಯುತ್ತಾರೆ. ಆ ಸ್ನೇಹಿತೆಯು ಸ್ವಾಮಿ ವಿವೇಕಾನಂದರ ವಿರುದ್ಧ ನಡೆಯುತ್ತಿದ್ದ ಅಪಪ್ರಚಾರವನ್ನು ಕೇಳಿಸಿಕೊಳ್ಳುತ್ತಿದ್ದರೆಂದು ಕಾಣುತ್ತದೆ. ಅದರಲ್ಲಿ ಶ್ರೀಮತಿ ಬ್ಯಾಗ್ಲಿ ಹೀಗೆ ಬರೆಯುತ್ತಾರೆ:


''ನನ್ನ ಮೊದಲ ಶಬ್ದವಿದು. ಸ್ವಾಮಿ ವಿವೇಕಾನಂದರ ವಿರುದ್ಧ ನಡೆಯುತ್ತಿರುವ ವದಂತಿಗಳೆಲ್ಲವೂ ಮೊದಲಿನಿಂದ ಕಡೆಯವರೆಗೂ ಸರ್ವಥಾ ಸುಳ್ಳು. ಅವರು ನಮ್ಮ ಜೊತೆಗೆ ಅನ್ನಿಸ್ಕ್ವಾಮ್ ನಗರದಲ್ಲಿ ಆರು ವಾರಗಳನ್ನು ಕಳೆದರು. ಅದರಲ್ಲಿ ಪ್ರತಿಯೊಂದು ದಿವಸವೂ ನಮ್ಮ ಪಾಲಿಗೆ ಆನಂದದಾಯಕವಾಗಿತ್ತು. ಇದಲ್ಲದೆ ಸ್ವಾಮಿ ವಿವೇಕಾನಂದರನ್ನು ಡೆಟ್ರಾಯ್ಟ್ ನಗರದ ಹಲವಾರು ಕ್ಲಬ್ಬುಗಳ ಗಣ್ಯವ್ಯಕ್ತಿಗಳು ಆಹ್ವಾನಿಸಿದರು. ಸುಂದರವಾದ ಸೌಧಗಳಲ್ಲಿ ಅವರಿಗೆ ರಾತ್ರಿಭೋಜನವನ್ನು ನೀಡಲಾಯಿತು. ಆ ಮೂಲಕ ಹೆಚ್ಚು ಹೆಚ್ಚು ಜನರು ಅವರನ್ನು ಭೇಟಿ ಮಾಡುವಂತೆ ಆಯಿತು. ಅವರು ಅಂಥ ಗೌರವಕ್ಕೆ ಅರ್ಹರಾಗಿದ್ದರಿಂದಲೇ ಅವರನ್ನು ಎಲ್ಲರೂ ಸನ್ಮಾನಿಸುತ್ತಿದ್ದರು. ಅವರ ಪರಿಚಯವಿರುವವರೆಲ್ಲರೂ ಅವರ ಚಾರಿತ್ರ್ಯದ ಉತ್ಕೃಷ್ಟತೆ ಮತ್ತು ಪರಿಶುದ್ಧತೆಯನ್ನು ಗುರುತಿಸದೇ ಇರುತ್ತಿರಲಿಲ್ಲ. ಹಾಗೆಯೇ ಅವರ ಪ್ರಬಲ ಆಧ್ಯಾತ್ಮಿಕ ಸ್ವಭಾವವನ್ನು ಗಮನಿಸದೆ ಇರುತ್ತಿರಲಿಲ್ಲ. ಈಗ ತಾನೇ ಕಳೆದ ಬೇಸಿಗೆ ಕಾಲದಲ್ಲಿ ಅನ್ನಿಸ್ಕ್ವಾಮ್‌ನಲ್ಲಿರುವ ನಮ್ಮ ಬೇಸಿಗೆಯ ಮನೆಯಲ್ಲಿ ಬಂದು ಇರುವಂತೆ ಬಾಸ್ಟನ್ ನಗರದಲ್ಲಿ ವಾಸಿಸುತ್ತಿದ್ದ ವಿವೇಕಾನಂದರನ್ನು ನಾನು ಆಹ್ವಾನಿಸಿದೆ. ಅವರು ಬಂದು ನಮ್ಮ ಜೊತೆ ಮೂರು ವಾರಗಳ ಕಾಲ ಇದ್ದರು. ಆ ಮೂಲಕ ನಮಗೆ ಒಂದು ಸೌಭಾಗ್ಯವನ್ನು ಕರುಣಿಸಿದರು. ಇಷ್ಟಲ್ಲದೆ ಅವರ ಸಾನ್ನಿಧ್ಯವೇ ನಮಗೆ ಅಪಾರ ಆನಂದವನ್ನು ಉಂಟುಮಾಡುತ್ತಿತ್ತು. ನಮ್ಮ ನೆರೆಹೊರೆಯವರು ಕೂಡ ಇದನ್ನೇ ಅನುಭವಿಸಿದರು ಎಂದು ನನಗೆ ಖಾತರಿ ಇದೆ. ನಮಗೆ ಸ್ವಾಮಿ ವಿವೇಕಾನಂದರು ಚೆನ್ನಾಗಿ ಗೊತ್ತು. ಅವರ ವಿರುದ್ಧ ಸುಳ್ಳು ವದಂತಿಗಳನ್ನು ಹಬ್ಬಿಸುವವರು ಯಾರು?''

ಇದಾಗಿ ಮರುದಿನವೇ ಶ್ರೀಮತಿ ಬ್ಯಾಗ್ಲಿ ಅವರ ಅವಿವಾಹಿತ ಮಗಳು ಹೆಲೆನ್ ಬ್ಯಾಗ್ಲಿ ಸ್ವಾಮೀಜಿಯವರನ್ನು ಸಮರ್ಥಿಸುತ್ತ, ಶ್ರೀಮತಿ ಸ್ಮಿತ್ ಎಂಬಾಕೆಗೆ ಹೀಗೆ ಬರೆಯುತ್ತಾರೆ:

''(ಸ್ವಾಮಿ ವಿವೇಕಾನಂದರ ಬಗ್ಗೆ) ಈ ಕಟ್ಟುಕತೆಗಳನ್ನು ಹರಡಿದವರು.. ಇವರಲ್ಲವೆಂದು ತಿಳಿದು ನಿರಾಳವಾಯಿತು. ನನಗೆ ಸಾಧ್ಯವಾದರೆ, ಈ ವದಂತಿಯನ್ನು ಹರಡುತ್ತಿರುವ ಶ್ರೀಮತಿ ರ.. ಎಂಬಾಕೆಯನ್ನು ನಾನು ಭೇಟಿಮಾಡಲು ಇಚ್ಛಿಸುತ್ತೇನೆ. ಈ ಬಗೆಯ ಹೇಳಿಕೆಗಳನ್ನು ನೀಡುವುದಕ್ಕೆ ಆಕೆಗೆ ಇರುವ ಅಧಿಕಾರವಾದರೂ ಏನು ಎಂದು ನಾನು ಪ್ರಶ್ನಿಸುತ್ತೇನೆ. ಸಾಧ್ಯವಾದರೆ ಸ್ವಾಮಿ ವಿವೇಕಾನಂದರ ಬಗ್ಗೆ ಈ ಸುಳ್ಳುಗಳನ್ನು ಹರಡಲು ಆರಂಭಿಸಿದವರು ಯಾರು ಎಂದು ನಾನು ಕಂಡು ಹಿಡಿಯಲು ಪ್ರಯತ್ನಿಸುತ್ತೇನೆ. ಇದನ್ನು ನಾನು ಯಾರಿಗೂ ಅರಿಯದಂತೆ ಮಾಡುತ್ತೇನೆ ಎಂದೇನೂ ಮುಕ್ತವಾಗಿ ಹೇಳಬೇಕಾಗಿಲ್ಲ.''

*(ಮುಂದುವರಿಯುವುದು)*

**ಯುವಚೇತನ**



## ಆತ್ಮಭಾವ – ಆತ್ಮವಿಶ್ವಾಸ

ಹಿಂದೂಧರ್ಮದ ಮಹಾಸತ್ಯವನ್ನು ಜಗತ್ತಿಗೆ ಬೋಧಿಸಿ. ಪ್ರಪಂಚ ಅದಕ್ಕಾಗಿ ಕಾಯುತ್ತಿದೆ. ಹಲವು ಶತಮಾನಗಳಿಂದ ಜನರಿಗೆ ಹೀನ ಅವಸ್ಥೆಯ ವಿಷಯವನ್ನು ಹೇಳಿದ್ದಾಯಿತು. ಅವರು ಕೆಲಸಕ್ಕೆ ಬಾರದವರೆಂದು ಅವರಿಗೆ ಹೇಳಿದ್ದಾಯಿತು. ಪ್ರಪಂಚದಲ್ಲೆಲ್ಲಾ ಸಾಮಾನ್ಯರಿಗೆ ಅವರು ಮನುಷ್ಯರೇ ಅಲ್ಲವೆಂದು ಸಾರಿದ್ದಾಯಿತು. ಹಲವು ಶತಮಾನಗಳಿಂದ ಅವರು ಅಂಜುಕುಳಿಗಳಾಗಿ ಈಗ ಅವರು ಮೃಗಸಮಾನರಾಗಿರುವರು. ಆತ್ಮದ ವಿಷಯವನ್ನು ಕೇಳುವುದಕ್ಕೇ ಅವರಿಗೆ ಅವಕಾಶವಿರಲಿಲ್ಲ. ಅವರಲ್ಲಿ ಅತಿ ನೀಚರಲ್ಲಿಯೂ ಆತ್ಮವಿದೆ. ಅದಕ್ಕೆ ಹುಟ್ಟು , ಸಾವು ಇಲ್ಲ ; ಕತ್ತಿ ಅದನ್ನು ಕಡಿಯಲಾರದು, ಬೆಂಕಿ ದಹಿಸಲಾರದು, ಗಾಳಿ ಒಣಗಿಸಲಾರದು. ಆದಿ ಅಂತ್ಯಗಳಿಲ್ಲದ ಪರಿಶುದ್ಧ ವಾದ ಸರ್ವವ್ಯಾಪಿಯಾದ ಸರ್ವಶಕ್ತನಾದ ಆತ್ಮ ಅದು. ಮೊದಲು ತಮ್ಮಲ್ಲಿ ತಮಗೆ ಶ್ರದ್ಧೆಯಿರಲಿ. ಇಂಗ್ಲಿಷಿನವರಿಗೂ ನಿಮಗೂ ಇರುವ ವ್ಯತ್ಯಾಸಕ್ಕೆ ಕಾರಣವೇನು? ಅವರು ತಮ್ಮ ಧರ್ಮ ಕರ್ತವ್ಯ ಮುಂತಾದುವನ್ನು ಮಾತನಾಡಿಕೊಳ್ಳಲಿ. ನನಗೆ ಅದರ ವ್ಯತ್ಯಾಸ ಗೊತ್ತಾಗಿದೆ. ವ್ಯತ್ಯಾಸ ಇಲ್ಲಿದೆ : ಆಂಗ್ಲೇಯನಿಗೆ ಆತ್ಮವಿಶ್ವಾಸವಿದೆ. ನಿಮಗೆ ಇಲ್ಲ. ಆತ ಆಂಗ್ಲೇಯನಾದುದರಿಂದ ತಾನು ಏನನ್ನು ಬೇಕಾದರೂ ಮಾಡಬಲ್ಲೆನೆಂದು ತಿಳಿಯುವನು. ಆತನಲ್ಲಿರುವ ದೇವರನ್ನು ಅದು ಹೊರಗೆ ತರುವುದು. ತನಗೆ ತೋರಿದುದನ್ನು ಅವನು ಸಾಧಿಸಬಲ್ಲ. ಆದರೆ ಪ್ರತಿದಿನ ನಿಮಗೆ, ನಿಮ್ಮಿಂದ ಏನೂ ಆಗುವುದಿಲ್ಲ , ನಿಷ್ಪ್ರಯೋಜಕರು ನೀವು ಎಂದು ಬೋಧಿಸಲಾಗಿದೆ. ಅದರಂತೆಯೇ ನೀವು ಆಗುತ್ತಿರುವಿರಿ. *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು. ೧೦೩-೦೪)*